ಪ್ರಕಟಣೆಗಳು

ಅಧ್ಯಕ್ಷರು.—೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬಗ್ಗೆ ವಿಧಾನಸಭೆಯಲ್ಲಿ ಮಂಡಿಸಲು ಭಾರತ ಸಂವಿಧಾನದ ೨೦೫ (೧)ನೇ ಅನುಚ್ಛೇದದ ಮೇರೆಗೆ ಸನ್ಮಾನ್ಯ ರಾಜ್ಯಪಾಲರು ಶಿಫಾರಸ್ಸನ್ನು ಮಾಡಿದ್ದಾರೆಂದು ಸದನಕ್ಕೆ ತಿಳಿಯುಬಯಸುತ್ತೇನೆ.

೨) ೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಪರ್ಯಾಲೋಚಿಸಿ ಅಂಗೀಕರಿಸಲು ಸನ್ಮಾನ್ಯ ರಾಜ್ಯಪಾಲರು ಶಿಫಾರಸ್ಸು ಮಾಡಿದ್ದಾರೆಂದು ಸದನದ ಗಮನಕ್ಕೆ ತರಬಯಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಮಂಡನೆ

ಅಧ್ಯಕ್ಷರು.—ಈಗ ಭಾರತ ಸಂವಿಧಾನದ ೨೦೫ (೧)ನೇ ಅನುಚ್ಛೇದದ ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬಗ್ಗೆ ಪ್ರಸ್ತಾವಗಳನ್ನು ಸಭೆಗೆ ಒಪ್ಪಿಸುವುದು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ೨೦೫ (೧)ನೇ ಅನುಚ್ಛೇದದ ಮೇರೆಗೆ ೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬಗ್ಗೆ ಪ್ರಸ್ತಾವಗಳನ್ನು ಮಾನ್ಯ ಮಂಖ್ಯಮಂತ್ರಿಗಳ ಪರವಾಗಿ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಹಕ್ಕುಚ್ಯುತಿ ಪ್ರಸ್ತಾವ

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆಯವರು ಸದನದಲ್ಲಿ ಹಕ್ಕುಚ್ಯುತಿ ಯೊಗುವಂತೆ ವರ್ತಿಸಿರುವುದು

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ ೧೯೦ರ ಕೆಳಗೆ ನಾನು ಒಂದು ಪ್ರಿವಿಲೇಜು ಮೋಷನ್ ಕೊಟ್ಟಿದ್ದೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಸಹ ಒಂದು ಪ್ರಿವಿಲೇಜ್ ಮೋಷನನ್ನು ತಪ್ಪಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ನಾನು ಸಹ ಒಂದು ಪ್ರಿವಿಲೇಜ್ ಮೋಷನನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಮೂರು ಜನರೂ ಒಟ್ಟಿಗೆ ಎದ್ದು ನಿಂತಿದ್ದೀರಿ.

ಶ್ರೀ ರಾಜವರ್ಧನ್.—ನಾನು ಕೊಟ್ಟಿರುವುದನ್ನು ಮೊದಲು ತೆಗೆದುಕೊಳ್ಳಿ.

I will now read the notice given by the hon'ble Govt. Chief whip.

> "Question of breach of privilege against Sri Mallikarjuna Kharge hon'ble member of the Legislative Assembly under rule 190 of Rules of Procedure and Conduct of Business of Karnataka Legislative Assembly."...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಸರಿಯಲ್ಲ. ನಾನು ಮೊದಲು ನೋಟೀಸ್ ಕೊಟ್ಟಿದ್ದೇನೆ, ಆದ್ದರಿಂದ ನನ್ನದನ್ನು ಮೊದಲು ತೆಗೆದುಕೊಳ್ಳಿ.